ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ

# ಅಂಗವಿಕಲತೆ ಮತ್ತು ಅದರ ಪ್ರಕಾರಗಳು


ಗುರು ಪ್ರಸಾದ್ ಎಸ್
ಸಹಾಯಕ ನಿರ್ದೇಶಕರು
ಎಪಿಡಿ


Kiran Raghupathi

# ಅಂಗವಿಕಲತೆ ಎಂದರೇನು?

ಸಾಮಾನ್ಯ ಜನರು ಮಾಡುವ ಕೆಲಸಗಳನ್ನು ಸುಲಭವಾಗಿ ಮಾಡಲು ದೀರ್ಘಕಾಲ ಅಥವಾ ಶಾಶ್ವತವಾದ ಅಸಮರ್ಥತೆಯೇ ಅಂಗವಿಕಲತೆ.

ಸಮಾಜದ ಹಲವು ಶಕ್ತಿಗಳು ಒಬ್ಬ ಅಥವಾ ಗುಂಪಿನ ವ್ಯಕ್ತಿಗಳ ಬದುಕಿಗೆ ಅನಾನುಕೂಲತೆ ಮತ್ತು ನಿರ್ಭಂದಗಳನ್ನು ಹೇರಿ ಸಮಾಜದ ಮುಖ್ಯವಾಹಿನಿಯಿಂದ ಜನರನ್ನು ಬೇರ್ಪಡಿಸುವ ಸ್ಥಿತಿಗತಿಯೇ ಅಂಗವಿಕಲತೆ.

Kiran Raghupathi

ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ

# ಪುನಃಶ್ಚೇತನ ಎಂದರೇನು?

ಸಮಾಜದಲ್ಲಿ ಅಂಗವಿಕಲರ ಸರ್ವತೋಮುಖ ಅಭಿವೃದ್ಧಿಗೆ ಅಗತ್ಯವಿರುವ ಶಿಕ್ಷಣ, ಆರೋಗ್ಯ, ಕೌಶಲ್ಯ, ತರಬೇತಿ ಮತ್ತು ಉದ್ಯೋಗ –

ಹೀಗೆ ವಿವಿಧ ವಿಷಯಗಳಿಗೆ ಸಂಬಂಧಪಟ್ಟ ಕಾರ್ಯಕ್ರಮಗಳನ್ನು ಹೊಂದಿದ್ದು ಅಂಗವಿಕಲ ವ್ಯಕ್ತಿಗಳು ಸಕ್ರೀಯವಾಗಿ ಸಮಾಜದಲ್ಲಿ ಭಾಗವಹಿಸಲು ಪ್ರೋತ್ಸಾಹಿಸುವುದೇ ಪುನಶ್ಚೇತನ.

**ಅವರಲ್ಲಿರುವ ನ್ಯೂನ್ಯತೆಯನ್ನು ಪರಿಗಣಿಸದೆ ಅವರಲ್ಲಿರುವ ಸಾಮರ್ಥ್ಯವನ್ನು ಗುರುತಿಸಿ, ಅದನ್ನು ಪ್ರೋತ್ಸಾಹಿಸಿ ಅವರಲ್ಲಿ ನಂಬಿಕೆ, ಆತ್ಮವಿಶ್ವಾಸ ಮತ್ತು ಧೈರ್ಯವನ್ನು ತುಂಬುವುದರ ಮೂಲಕ ಮುಖ್ಯವಾಹಿನಿಗೆ ತಯಾರಿ ಮಾಡುವುದು**

Kiran Raghupathi

ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ

# ೧೯೯೫ರ ಅಂಗವಿಕಲರ ಕಾಯ್ದೆ ಪ್ರಕಾರ ಅಂಗವಿಕಲತೆಯ ವಿಧಗಳು

1. ದೈಹಿಕ ಅಂಗವಿಕಲರು
2. ಅಂಧತ್ವ
3. ವಾಕ್ ಮತ್ತು ಶ್ರವಣದೋಷ
4. ಬುದ್ದಿಮಾಂಧ್ಯರು
5. ಮಾನಸಿಕ ಅಸ್ವಸ್ಥರು
6. ಬಹುವಿಧ ಅಂಗವಿಕಲತೆ,
7. ಕುಷ್ಠ ರೋಗ ನಿವಾರಿತ ಅಂಗವಿಕಲರು

4 ರೀತಿಯಲ್ಲಿ ವಿಗಂಡಿಸಲಾಗಿದೆ:

**ಸೌಮ್ಯ, ಸಾಧಾರಣ, ತೀವ್ರ ಮತ್ತು ಅತಿತೀವ್ರ**

Kiran Raghupathi

ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ

# ವಿಕಲಚೇತನರ ಹಕ್ಕುಗಳ ಕಾಯಿದೆ–2016ರ ಪ್ರಕಾರ ಅಂಗವಿಕಲತೆಯ ವರ್ಗೀಕರಣ

1. ದೃಷ್ಟಿದೋಷ (Blindness)
2. ಮಂದ ದೃಷ್ಟಿ (Low-vision)
3. ಕುಷ್ಟರೋಗದಿಂದ ಗುಣವಾಗಿರುವವರು (Leprosy Cured persons)
4. ಶ್ರವಣ ದೋಷ {Hearing Impairment (deaf and hard of hearing)}
5. ದೈಹಿಕ ಅಂಗವಿಕಲತೆ (Loco-motor Disability)
6. ಕುಬ್ಜತೆ (Dwarfism)
7. ಬೌದ್ಧಿಕ ವಿಕಲತೆ (Intellectual Disability)
8. ಮಾನಸಿಕ ಅಸ್ವಸ್ಥತೆ (Mental Illness)
9. ಆಟಿಸಂ ಸ್ಪೆಕ್ಟ್ರಂ ಡಿಸಾರ್ಡರ್ (Autism Spectrum Disorder)
10. ಮೆದುಳು ವಾತ (Cerebral Palsy)

Kiran Raghupathi

ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ

# ವಿಕಲಚೇತನರ ಹಕ್ಕುಗಳ ಕಾಯಿದೆ–2016ರ ಪ್ರಕಾರ ಅಂಗವಿಕಲತೆಯ ವರ್ಗೀಕರಣ

೧೧. ಮಸ್ಕ್ಯುಲರ್ ಡಿಸ್‌ಟ್ರೋಫಿ (Muscular Dystrophy)
೧೨. ಕ್ರೋನಿಕ್ ನ್ಯೂರೂಲೊಜಿಕಲ್ ಕಂಡಿಷನ್ (Chronic Neurological conditions)
೧೩. ನಿರ್ದಿಷ್ಟ ಕಲಕಾ ನ್ಯೂನ್ಯತೆ (Specific Learning Disabilities)
೧೪. ಮಲ್ಟಿಪಲ್ ಸ್ಕ್ಲೀರೋಸಿಸ್ (Multiple Sclerosis)
೧೫. ಮಾತು ಮತ್ತು ಭಾಷೆಯ ವಿಕಲತೆ (Speech and Language disability)
೧೬. ತ್ಯಾಲೆಸೀಮಿಯ (Thalassemia)
೧೭. ಹೀಮೊಫಿಲಿಯ (Hemophilia)
೧೮. ಸಿಕ್ಲ್ ಸೆಲ್ ಎನೀಮಿಯ (Sickle Cell disease)
೧೯. ಬಹುವಿಧ ಅಂಗವಿಕಲತೆ (Multiple Disabilities including deaf blindness)
೨೦. ಆಸಿಡ್ ದಾಳಿಗೆ ತುತ್ತಾದವರು (Acid Attack victim)
೨೧. ಪಾರ್ಕಿನ್ಸನ್ ಕಾಯಿಲೆ (Parkinson's disease)

Kiran Raghupathi

ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ

## ೧. ದೃಷ್ಟಿ ದೋಷ:

(ಎ) "ಕುರುಡು" ಎಂದರೆ ಈ ಕೆಳಕಂಡ ಸ್ಥಿತಿಯಲ್ಲಿ ಇರುವವರು:

(ಬಿ) ಸಂಪೂರ್ಣವಾಗಿ ಕಣ್ಣುಗಳಲ್ಲಿ ದೃಷ್ಟಿ ಇಲ್ಲದವರು;



## ೨. "ಮಂದ ದೃಷ್ಟಿ" ಎಂದರೆ :

(ಎ) ಎರಡರಲ್ಲಿ ಉತ್ತಮವಾಗಿರುವ ಕಣ್ಣಿಗೆ ಅತ್ಯುತ್ತಮ ದೃಷ್ಟಿ ಸುಧಾರಣಾ ಮಸೂರ/ ಕನ್ನಡಕ ಹಾಕಿಯೂ ೬/೧೮ಗಿಂತ ಹೆಚ್ಚಿಲ್ಲದೆ, ೨೦/೬೦ಗಿಂತ ಕಡಿಮೆ ಇಲ್ಲದೆ ೩/೬೦ವರೆಗೆ, ೧೦/೨೦೦ ಸ್ನೆಲೆನ್ ಇರುವವರು.

(ಬಿ) ದೃಷ್ಟಿಯ ಹರವು ೪೦ರಿಂದ ೧೦ ಡಿಗ್ರಿಗಳವರೆಗೆ ಇರುವವರು.



Kiran Raghupathi

ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ

೩. **“ಕುಷ್ಟರೋಗದಿಂದ ಗುಣವಾಗಿರುವವರು”** ಎಂದರೆ ಕುಷ್ಟರೂಗದಿಂದ ಗುಣವಾಗಿದ್ದು ಕೆಳಕಂಡ ಸ್ಥಿತಿಯಲ್ಲಿ ಇರುವವರು:

(ಎ) ಹೊರನೋಟಕ್ಕೆ ಏನೂ ಕಾಣದಿದ್ದರೂ, ಕೈ ಕಾಲುಗಳಲ್ಲಿ ಸ್ಪರ್ಶ ಸಂವೇದನೆ ಇಲ್ಲದಿರುವುದು, ಕಣ್ಣು ಮತ್ತು ಕಣ್ಣಿನ ರೆಪ್ಪೆಗಳಲ್ಲಿ ಚಲನೆ ಇಲ್ಲದಿರುವುದು;

(ಬ) ಹೊರನೋಟಕ್ಕೆ ಊನ ಮತ್ತು ಲಕ್ವ ಹೊಡೆದಿರುವಂತೆ ಕಂಡರೂ, ಕೈ ಕಾಲುಗಳಲ್ಲಿ ಸಾಕಷ್ಟು ಚಲನೆ ಇದ್ದು, ಸಾಧಾರಣ ಆರ್ಥಿಕ (ಹಣ ಸಂಪಾದನೆ ಮಾಡುವಂತಹ) ಚಟುವಟಿಕೆಗಳಲ್ಲಿ ತೊಡಗಬಹುದಾದವರು;



Kiran Raghupathi

ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ

“ಮಂದಕಿವಿ” ಎಂದರೆ ಎರಡೂ ಕಿವಿಗಳಲ್ಲಿ ಮಾತಿನ ತರಂಗಗಳಲ್ಲಿ ೬೦ DB ಇಂದ ೭೦ DB ಕಡಿಮೆ ಕೇಳಿಸುವವರು.

(ಎ) “ಮಾತು ಮತ್ತು ಭಾಷಾ ದೋಷ” – ಗಂಟಲು/ಧ್ವನಿ ಪೆಟ್ಟಿಗೆಯ ಶಸ್ತ್ರಚಿಕಿತ್ಸೆ ಆದಾಗ ಮಿದುಳಿಗೆ ಲಕ್ವ ಹೊಡೆದಾಗ ಮಾತನಾಡುವಲ್ಲಿ ಉಂಟಾಗುವ ದೋಷ ಅಥವಾ ಇನ್ಯಾವುದೇ ಶಾರೀರಿಕ ಅಥವಾ ನರ-ಸಂಬಂಧಿತ ಕಾರಣಗಳಿಂದ ಉಂಟಾಗುವ ವಾಕ್ (ಮಾತಿನಲ್ಲಿ) ದೋಷ.





Kiran Raghupathi

ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ

## ೫. ಲೊಕೊಮೊಟೊಸ್ ಅಂಗವಿಕಲತೆ (ದೈಹಿಕ ಅಂಗವಿಕಲತೆ):–

ಎ. ಚಲನೆಯಲ್ಲಿ ನ್ಯೂನತೆ: (ವ್ಯಕ್ತಿ ತನ್ನ ಶರೀರ ಅಥವಾ ಅದರ ಭಾಗಗಳನ್ನು ಅಥವಾ ವಸ್ತುಗಳನ್ನು ನಿರ್ದಿಷ್ಟವಾಗಿ ಚಲಿಸಲು ಅಶಕ್ಯರಾಗಿ ಇರುವುದು. ಈ ಅಶಕ್ಯತೆ ಅವರ ಸ್ನಾಯು, ಮೂಳೆ ಅಥವಾ ನರಮಂಡಲದ ವ್ಯವಸ್ಥೆ ಅಥವಾ ರಚನೆಯಲ್ಲಿ ಇರುವ ಏರುಪೇರಿನಿಂದ ಉಂಟಾಗುತ್ತದೆ).









Kiran Raghupathi

ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ

**೬. "ಕುಬ್ಜತೆ" :**

ಅನುವಂಶಿಕವಾಗಿ ಅಥವಾ ದೈಹಿಕ ತೊಂದರೆ ಇಂದ ವಯಸ್ಕ ವ್ಯಕ್ತಿಯ ಎತ್ತರ ನಾಲ್ಕು ಅಡಿ ಹತ್ತು ಅಂಗುಲ ಅಥವಾ ಅದಕ್ಕೂ ಕಡಿಮೆ ಆಗಿರುವುದು.



## ೭. “ಬೌದ್ಧಿಕ ವಿಕಲತೆ”:

ವಿಚಾರ ಮಾಡುವುದು, ಕಲಿಯುವುದು, ಸಮಸ್ಯೆ ಬಗೆಹರಿಸುವುದು ಮತ್ತು ಸಾಮಾಜಿಕ ವರ್ತನೆಯಲ್ಲಿ ಗಮನಾರ್ಹ ಕೊರತೆ ಇರುವ ಸ್ಥಿತಿ. ಇದರಿಂದ ದೈನಂದಿನ ಸಾಮಾಜಿಕ ಮತ್ತು ವ್ಯಾವಹಾರಿಕ ವಿಷಯಳಲ್ಲಿ ಈ ಕೆಳಗಿನ ಕೊರತೆ ಕಂಡುಬರುವುದು:

(ಎ) ವಿಶಿಷ್ಟ ಕಲಿಕೆ ತೊಂದರೆಗಳು: ಮಾತು ಅಥವಾ ಬರವಣಿಗೆಯ ಭಾಷೆಯನ್ನು ಅರ್ಥ ಮಾಡಿಕೊಂಡು ಗ್ರಹಿಸುವಲ್ಲಿ ಅಡಚಣೆ ಇದ್ದು, ಮಾತು, ಓದು, ಬರವಣಿಗೆ, ಕಾಗುಣಿತ, ವ್ಯಾಕರಣ ಮತ್ತು ಲೆಕ್ಕ ಇವೆಲ್ಲದರಲ್ಲೂ ವ್ಯಕ್ತಿಗೆ ಅಶಕ್ಯತೆ ಇರುತ್ತದೆ. ಇದರೊಂದಿಗೆ ಸಂದರ್ಭವನ್ನು ಅರ್ಥ ಮಾಡಿಕೊಳ್ಳುವುದರಲ್ಲೂ ವ್ಯಕ್ತಿಗೆ ತೊಂದರೆ ಇರುತ್ತದೆ.

“ಬುದ್ಧಿ ಮಾಂದ್ಯತೆ” ಅಸ್ವಸ್ಥತೆ ಅಲ್ಲ. ಅದು ಕುಂಠಿತ ಬುದ್ಧಿ ಬೆಳವಣಿಗೆ.



Kiran Raghupathi

ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ

**೮. ಮಾನಸಿಕ ವರ್ತನೆ:**

"ಮಾನಸಿಕ ಅಸ್ವಸ್ಥತೆ"ಯಲ್ಲಿ ಆಲೋಚನೆ, ವರ್ತನೆ, ಭಾವನೆ, ಗ್ರಹಿಕೆ, ನೆನಪು ಮುಂತಾದುವುಗಳಲ್ಲಿ ಗಮನಾರ್ಹವಾದ ಏರುಪೇರಿದ್ದು, ವ್ಯಕ್ತಿಯ ವಿವೇಚನೆ, ನೈಜತೆಯ ಅರಿವು ಹಾಗೂ ವಿಚಾರ ಮಾಡುವ ರೀತಿಗಳು ಆತ ಜೀವನದ ಸಾಧಾರಣ ಕೆಲಸ ಕಾರ್ಯಗಳನ್ನು ನಿರ್ವಹಿಸುವುದರಲ್ಲಿ ತೀವ್ರ ಕೊರತೆ ಇರುತ್ತದೆ.



೯. **"ಆಟಿಸಂ"** (ಅಂತರ್ಮುಖಿ)

ತೊಂದರೆಯಲ್ಲೂ ದೊಡ್ಡ ವ್ಯತ್ಯಾಸಗಳಿರುತ್ತವೆ. ಇದು ಮಗುವಿನ ಮೊದಲ ಮೂರು ವರ್ಷಗಳಲ್ಲಿ ಕಾಣಿಸಿಕೊಳ್ಳುವ ವಿಕಲತೆ. ವ್ಯವಹಾರ, ಸಂಭಾಷಣೆ ಮತ್ತು ವಿಶೇಷವಾಗಿ ಇತರರೊಡನೆ ಸಂಬಂಧಿಸುವಲ್ಲಿ ತೊಂದರೆ ಇದ್ದು ಮಗು ವಿಚಿತ್ರವಾದ, ಪದೇ ಪದೇ ಮಾಡಿದ್ದನ್ನೇ ಮಾಡುವ ವರ್ತನೆಯನ್ನು ತೋರುತ್ತದೆ.



Kiran Raghupathi


ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ

**೧೦. ಮಿದುಳುವಾತ:** ಎಂದರೆ ಕಾಲಾನುಕ್ರಮದಲ್ಲಿ ಉಲ್ಬಣಗೊಳ್ಳದಂತಹ ನರಮಂಡಲದ ತೊಂದರೆ ಶರೀರದ ಚಲನೆ ಮತ್ತು ಸ್ನಾಯುಗಳ ಸಂಚಲನೆಯನ್ನು ಬಾಧಿಸುವುದು. ಇದು ಜನನಕ್ಕೂ ಮುಂಚೆ, ಪ್ರಸೂತಿ ಸಮಯದಲ್ಲಿ ಅಥವಾ ಜನಿಸಿದ ಒಡನೆ ಶಿಶುವಿನ ಮಿದುಳಿನ ಕೆಲವು ಭಾಗಗಳಿಗೆ ಹಾನಿ/ಆಘಾತ ಆದ ಕಾರಣದಿಂದ ಉಂಟಾಗುವ ಸ್ಥಿತಿ.



Kiran Raghupathi

೧೧. **"ಮಸ್ಕ್ಯುಲರ್ ಡಿಸ್‌ಟ್ರೋಫಿ'**:
ಅನುವಂಶಿಕವಾಗಿ ಉಂಟಾಗುವ ಒಂದು ತರಹದ ಮಾಂಸಖಂಡದ ಖಾಯಿಲೆಗಳು. ಇದರಿಂದ ವ್ಯಕ್ತಿಯ ಚಲನೆಗೆ ಅಗತ್ಯವಾದ ಮಾಂಸಖಂಡಗಳು ದುರ್ಬಲವಾಗುತ್ತಾ ಹೋಗುತ್ತವೆ. ಮಲ್ಟಿಪಲ್ ಡಿಸ್‌ಟ್ರೋಫಿ ಇರುವವರಿಗೆ ವಂಶವಾಹಿನಿಗಳಲ್ಲಿ ಏರುಪೇರಿದ್ದು ಅವರ ಶರೀರದಲ್ಲಿ ಆರೋಗ್ಯವಾದ ಮಾಂಸಖಂಡಗಳನ್ನು ನಿರ್ಮಿಸಲು ಅಗತ್ಯವಾದ ಪ್ರೋಟೀನ್ ಉತ್ಪತ್ತಿ ಆಗುವುದಿಲ್ಲ. ಇದರಿಂದ ಕ್ರಮೇಣ ಮೂಳೆ ಮತ್ತು ಮಾಂಸಖಂಡದ ಅಂಗಾಂಶಗಳು ಮತ್ತು ಕೋಶಗಳು ಸಾಯುತ್ತವೆ.



Kiran Raghupathi

## ೧೨. ದೀರ್ಘಕಾಲೀನ, ಕ್ರಮೇಣ ಹೆಚ್ಚುತ್ತಾ ಹೋಗುವ ನರಮಂಡಲದ ಕಾಯಿಲೆಗಳಿಂದ ಉಂಟಾಗುವ ಅಂಗವಿಕಲತೆಗಳು:




Kiran Raghupathi


ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ

## ೧೩ .ನಿರ್ದಿಷ್ಟವಾದ ಕಲಿಕೆಯ ಅಂಗವಿಕಲತೆಗಳು:

ಮೂಲ ಮನಃಶಾಸ್ತ್ರದ ಪ್ರಕ್ರಿಯೆಯಲ್ಲಿ ಅರ್ಥಮಾಡಿಕೊಳ್ಳುವ ಮತ್ತು ಭಾಷೆ, ಮಾತನಾಡುವ ಅಥವಾ ಬರೆಯುವುದರಲಿ ಸ್ಪಷ್ಟತೆ ಇಲ್ಲದಿರುವುದು, ಇದರಿಂದ ಕೇಳಿಸಿಕೊಳ್ಳುವುದು, ಯೋಚಿಸುವುದು, ಮಾತಾಡುವುದು, ಬರೆಯುವುದು, ಓದುವುದು, ಕಾಗುಣಿತ ಅಥವಾ ಗಣಿತ ಲೆಕ್ಕಗಳನ್ನು ಮಾಡುವುದರಲ್ಲಿ ಅವರ ಸಾಮರ್ಥ್ಯ ಕಡಿಮೆ ಇರುತ್ತದೆ.



**೧ಳ ಮಲ್ಟಿಪಲ್ ಸ್ಕ್ಲೀರೋಸಿಸ್ (ಎಂ.ಎಸ್):** ನರಮಂಡಲದ ಉರಿಯೂತದಿಂದ ಮಿದುಳು ಮತ್ತು ಬೆನ್ನು ಹುರಿಯ ನರಕೋಶಗಳ ಮೇಲ್ಪದರಕ್ಕೆ ಹಾನಿ ಉಂಟಾಗಿ (ಮೈಲಿನೇಶನ್), ನರಕೋಶಗಳು ಒಂದರೊಡನೆ ಒಂದು ಸಂಪರ್ಕ ಕಡಿದುಕೊಳ್ಳುತ್ತವೆ. (ಇದರಿಂದ ನರ ಹಾಗೂ ಸ್ನಾಯುಗಳಲ್ಲಿ ಕ್ರಮೇಣ ಶಕ್ತಿ ಕುಂದುತ್ತದೆ).




Kiran Raghupathi


## ೧೫. ಮಾತು ಮತ್ತು ಭಾಷಾಕಲಿಕೆಯ ಅಂಗವಿಕಲತೆ:

”ವೈಯಕ್ತಿಕ ಅಂಗವಿಲಕ ಶಿಕ್ಷಣ ಕಾಯಿದೆ” ಪ್ರಕಾರ ತೊದಲುವುದು, ಅಸ್ಪಷ್ಟತೆ, ಭಾಷೆಯ ನ್ಯೂನ್ಯತೆ, ಧ್ವನಿಯ ನ್ಯೂನ್ಯತೆ ಇವುಗಳಿಂದ ಮಗುವಿನ ಶಿಕ್ಷಣದ ಕಾರ್ಯನಿರ್ವಹಣೆಯ ಮೇಲೆ ಪ್ರಭಾವಬೀರುವುದು



೧೬

**“ತ್ಯಾಲೆಸೀಮಿಯು”:** ರಕ್ತದಲ್ಲಿ ಕಬ್ಬಿಣಾಂಶ ತೀರಾ ಕಡಿಮೆ ಅಥವಾ ಇಲ್ಲದೆಯೇ ಇರುವ ಒಂದು ಅನುವಂಶೀಯ ಕಾಯಿಲೆ.




Kiran Raghupathi

ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ

## ೧೭. “ಹೀಮೊಫಿಲಿಯ”:


ಅನುವಂಶೀಯವಾಗಿ, ಸಾಧಾರಣವಾಗಿ ಗಂಡು ಮಕ್ಕಳಿಗೆ ಅವರ ತಾಯಿಯಿಂದ ಬರುವ ಕಾಯಿಲೆ. ಇವರಲ್ಲಿ ರಕ್ತವನ್ನು ಹೆಪ್ಪುಗಟ್ಟಿಸುವ ನೈಸರ್ಗಿಕವಾದ ರಸಾಯನಿಕ ಇಲ್ಲದೆ, ಒಂದು ಸಣ್ಣ ಗಾಯದಿಂದಲೂ ರಕ್ತವೆಲ್ಲ ಸೋರಿಹೋಗಿ ಸಾವೂ ಬರಬಹುದು.




Kiran Raghupathi

ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ

೧೮ "ಸಿಕ್ಲ್ ಸೆಲ್ ಎನೀಮಿಯ" – ಕೆಂಪು ರಕ್ತಕಣಗಳ ಹೊರ ಪದರ ಒಡೆದು ಹೋಗುವುದರಿಂದ ಸತತವಾಗಿ ಕೆಂಪು ಕಣಗಳೊಳಗಿನ ಕಬ್ಬಿಣದ ಅಂಶ ಸೋರಿಹೋಗುತ್ತಿರುತ್ತದೆ. ಇವರಿಗೆ ಸತತವಾದ ಕಬ್ಬಿಣದ ಕೊರತೆ, ಮೈ ಕೈ ನೋವು ಮತ್ತಿತರ ತೊಂದರೆಗಳು ಇರುತ್ತವೆ.




Kiran Raghupathi

ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ

**೧೯ “ಬಹುವಿಧ ಅಂಗವಿಕಲತೆ”**
ಮೇಲೆ ಹೇಳಿರುವ ಅಂಗವಿಕಲತೆಗಳಲ್ಲಿ ಒಂದಕ್ಕಿಂತ ಹೆಚ್ಚು ಇರುವ ಸ್ಥಿತಿ. ಕಿವುಡು – ಕುರುಡು ಎರಡೂ ಇದ್ದು ಬೆಳವಣಿಗೆ, ಶಿಕ್ಷಣ ಮತ್ತು ಸಂವಾದದಲ್ಲಿ ತೀವ್ರ ತೊಂದರೆಗಳು ಇರುವವರು.




**೨೦“ಆಸಿಡ್ ದಾಳಿಗೆ ತುತ್ತಾದವರು”** – ಅಂದರೆ ಆಸಿಡ್ ಅಥವಾ ಸುಡುವ ರಾಸಾಯನಿಕ ಎಸೆಯಲ್ಪಟ್ಟು ವಿಕೃತವಾಗಿರುವವರು.



Kiran Raghupathi

ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ

**೨೧ ಪಾರ್ಕಿನ್ಸನ್ ಕಾಯಿಲೆ:** (ಅದುರು ವಾಯು) ಶರೀರದಲ್ಲಿ ಅದುರುವಿಕೆ, ಸ್ನಾಯುಗಳ ಸೆಟೆತ, ನಿಧಾನವಾದ, ನಿಖರವಾಗಿಲ್ಲದ ಚಲನೆ ಇರುತ್ತದೆ. ಇದು ಮಿದುಳಿನ ಎಡಭಾಗದಲ್ಲಿ ಉಂಟಾಗುವ ಹಾನಿಯಿಂದ ಮತ್ತು ಮಿದುಳಿನಲ್ಲಿ ಉತ್ಪತ್ತಿಯಾಗುವ, ನರತಂತುಗಳಲ್ಲಿ ಸಂಪರ್ಕ ಏರ್ಪಡಿಸುವ ರಾಸಾಯನಿಕ **ಡೋಪಮಿನ್**ನ ಕೊರತೆ ಏರ್ಪಡುತ್ತದೆ. ಇದು, ಪ್ರಧಾನವಾಗಿ ಮಧ್ಯ ವಯಸ್ಸಿನಲ್ಲಿ ಮತ್ತು ವೃದ್ಧಾಪದಲ್ಲಿ ಬರುವ ಕಾಯಿಲೆ.




Kiran Raghupathi

ದಿ ಅಸೋಸಿಯೇಷನ್
ಆಫ್ ಪೀಪಲ್ ವಿತ್
ಡಿಸೆಬಿಲಿಟಿ

# ಧನ್ಯವಾದಗಳು

Kiran Raghupathi